**4 ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ,**
**ತುಮಕೂರು-ಮಧುಗಿರಿ**

**ಎಸ್.ಸಿ.ಸಂಖ್ಯೆ:** 5015/2022 ಪ್ರಾಸಾ-08
ಚಾಸಾ-09

ದಿನಾಂಕಃ 12-01-2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.

| | |
|---|---|
| **ಹೆಸರು** | ಬಸವರಾಜು |
| **ತಂದೆಯ / ಗಂಡನ ಹೆಸರು** | ಬಸಪ್ಪ |
| **ವಯಸ್ಸು** | 40 |
| **ಉದ್ಯೋಗ** | ವ್ಯವಸಾಯ |
| **ವಾಸಸ್ಥಳ** | ಬಾಲಬಸವನಹಳ್ಳಿ |

**ಮುಖ್ಯ ವಿಚಾರಣೆ ಸರ್ಕಾರಿ ಅಭಿಯೋಜಕರಿಂದ ಃ-**

ನ್ಯಾಯಾಲಯದ ಮುಂದೆ ಇರುವ ಶವ ತನಿಖೆಯನ್ನು ನೋಡಿ ಅದರ ಮೇಲೆ ಇರುವ ತಮ್ಮ ಸಹಿಯನ್ನು ಗುರುತಿಸಿರುತ್ತಾರೆ. ಸದರಿ ಶವ ತನಿಖೆಯನ್ನು ನಿಪಿ-17 ಎಂದು ಗುರುತಿಸಲಾಯಿತು ಪುಟ ಸಂಖ್ಯೆ6 ರಲ್ಲಿ ಮೇಲೆ ಸಾಕ್ಷಿ ಸಹಿಯನ್ನು ನಿಪಿ-17 (ಎ) ಎಂದು ಗುರುತಿಸಲಾಯಿತು. ದಿ. 05.02.2022 ರಂದು ಬೆಂಗಳೂರಿನ ದಿಗ್ವಿಜಯ ಆಸ್ಪತ್ರೆಯ ಶವ ಇಟ್ಟಿರುವ ರೂಂ ನಲ್ಲಿ ನಾನು ಸಹಿ ಹಾಕಿರುತ್ತೇನೆ. ಮೃತ ರಮೇಶನ ಶವವನ್ನು ಪರಿಶೀಲನೆ ಮಾಡಿ ನೋಡಿದಾಗ ಹಣೆಯ ಮೇಲೆ ರಕ್ತಗಾಯವಾಗಿತ್ತು , ಕಣ್ಣಿನ ಮೇಲೆ ರಕ್ತ ಹೆಪ್ಪುಗಟ್ಟಿತ್ತು, ತಲೆಯ ಹಿಂಭಾಗದಲ್ಲಿ ರಕ್ತಹೆಪ್ಪುಗಟ್ಟಿತ್ತು ಬಲಗಾಲಿನ ಮುಂಗಾಲಿನ ಮೇಲೆ ರಕ್ತಗಾಯವಾಗಿತ್ತು. ಬೆಳಿಗ್ಗೆ 11-30 ರಿಂದ 2-00 ಗಂಟೆಯವರೆಗೂ ಪೊಲೀಸರು ಶವ ಪಂಚನಾಮೆಯನ್ನು ಮಾಡಿರುತ್ತಾರೆ. ಶವ ಪಂಚನಾಮೆ ಕಾಲಕ್ಕೆ ನಾನು , ಮಂಜಣ್ಣ , ಮುತ್ತುರಾಜು , ಜಯಲಕ್ಷ್ಮಮ್ಮ , ಕಾಂತರಾಜು, ಕೃಷ್ಣ ಹಾಜರಿದ್ದರು. ರಾಮಯ್ಯ ಎನ್ನುವವರು ರಮೇಶ ಎನ್ನುವವರಿಗೆ ದೊಣ್ಣೆಯಿಂದ ಹೊಡೆದಿದ್ದರಿಂದ ಪೆಟ್ಟಾಗಿದ್ದರಿಂದ ರಮೇಶ ತೀರಿಕೊಂಡಿರುತ್ತಾನೆಂದು ನನಗೆ ಗೊತ್ತಾಗಿರುತ್ತದೆ.

ರಾಮಯ್ಯನ ಅಣ್ಣನ ಮಗಳ ಮದುವೆ ವಿಚಾರದಲ್ಲಿ ರಮೇಶನ ಜೊತೆ ಜಗಳ ಮಾಡಿ ಗಲಾಟೆ ಆಗಿರುತ್ತದೆ. ನ್ಯಾಯಾಲಯದ ಮುಂದೆ ಇರುವ ನಿಪಿ-5 ರಿಂದ 10 ಫೋಟೋಗಳನ್ನು ನೋಡಿದ್ದು, ಅದರಲ್ಲಿ ತನ್ನ ಇರುವಿಕೆ ಮತ್ತು ಶವವನ್ನು ನೋಡಿ ಗುರುತಿಸಿರುತ್ತಾರೆ.

**<u>ಪಾಟೀಸವಾಲು,ಶ್ರೀ. ವಿ. ಆರ್.ಆರ್. ವಕೀಲರಿಂದ ಆರೋಪಿ ಪರವಾಗಿಃ-</u>**

ನನ್ನ ಸ್ವಂತ ಊರು ಬಾಲಬಸವನಹಳ್ಳಿ, ಸಿರಾ ತಾಲ್ಲೂಕು. ನಮ್ಮ ಊರಿನಿಂದ ದಿಗ್ವಿಜಯ ಆಸ್ಪತ್ರೆಗೆ ಹೋಗಬೇಕಾದರೆ 3 ಗಂಟೆ ಸಮಯ ಬೇಕಾಗುತ್ತದೆ. ಪೊಲೀಸರು ನನಗೆ ಶವ ತನಿಖೆಯ ಸಮಯದಲ್ಲಿ ಹಾಜರಿರುವಂತೆ ನೋಟೀಸು ಕೊಟ್ಟಿರಲಿಲ್ಲ. ನಾನು ತಿಪ್ಪನಹಳ್ಳಿಗೆ ಬಂದಾಗ ರಮೇಶ ಮತ್ತು ರಾಮಯ್ಯನ ಮಧ್ಯೆ ಗಲಾಟೆ ಆಗಿದ್ದು ಮತ್ತು ರಮೇಶನಿಗೆ ಗಾಯವಾಗಿರುವ ಬಗ್ಗೆ ಗೊತ್ತಾಗಿರುತ್ತದೆ. ನಾನು 2 ನೇ ತಾರೀಖು ಬೆಳಿಗ್ಗೆ ತಿಪ್ಪನಹಳ್ಳಿ / ಬಂಡಿಪಾಳ್ಯಕ್ಕೆ ಬಂದಿರುತ್ತೇನೆ. ರಮೇಶ ಮತ್ತು ರಾಮಯ್ಯ ಸಂಬಂಧಿಕರು ಎಂದರೆ ನನಗೆ ಗೊತ್ತಿಲ್ಲ. ರಮೇಶನ ಹೆಂಡತಿ ನನಗೆ ದೂರದ ಸಂಬಂದಿ. ನಾವು ದಿ. 04.02.2022 ರಂದು ರಾತ್ರಿ ಬಂಡಿಪಾಳ್ಯಕ್ಕೆ ಬಂದಾಗ ಶವ ತರುವವರು ಯಾರು ಇಲ್ಲ ಎಂದು ಹೇಳಿದ್ದರಿಂದ ನಾನು , ಮಂಜಣ್ಣ , ಮುತ್ತುರಾಜು ಎಲ್ಲರೂ ಬಡವನಹಳ್ಳಿ ಪೊಲೀಸರೊಂದಿಗೆ ದಿಗ್ವಿಜಯ ಆಸ್ಪತ್ರೆಗೆ ದಿ.05.02.2022 ರಂದು ಹೋಗಿರುತ್ತೇವೆ. ನಾನು ಮತ್ತು ಮಂಜಣ್ಣ ರವರು ಕೂಡಿ ದಿ.04.02.2022 ರಂದು ರಾತ್ರಿ ಬಂಡಿಪಾಳ್ಯಕ್ಕೆ ಬಂದಿದ್ದೇವು. ಮಂಜಣ್ಣನಿಗೂ ಮತ್ತು ರಮೇಶನಿಗೂ ದೂರದ ಸಂಬಂಧ. ನಾವು ದಿಗ್ವಿಯ ಆಸ್ಪತ್ರೆಗೆ ಹೋದಾಗ ಆಸ್ಪತ್ರೆಯಲ್ಲಿ ಕಾಂತರಾಜು , ಮುದಣ್ಣ , ಜಯಲಕ್ಷ್ಮಮ್ಮ ಮತ್ತು ಕೃಷ್ಣ ಇದ್ದರು. ಅವರೆಲ್ಲರೂ ಬಂಡಿಪಾಳ್ಯದ ನಿವಾಸಿಗಳು. ನಾವು ಆ ದಿನ ಬಡವಹಳ್ಳಿಯನ್ನು ಬೆಳಿಗ್ಗೆ 7-00 ಗಂಟೆಗೆ ಬಿಟ್ಟು ನಮ್ಮ ಊರಿನವರ ಕಾರಿನಲ್ಲಿ ಹೋಗಿರುತ್ತೇವೆ. ನಮ್ಮ ಕಾರಿನಲ್ಲಿಯೇ ಪೊಲೀಸರನ್ನು ಕರೆದುಕೊಂಡು ಹೋಗಿರುತ್ತೇವೆ. ನಾವು ಹೋದ ಕಾರಿನ ಸಂಖ್ಯೆ ನಂಬರ್ ಗೊತ್ತಿರುವುದಿಲ್ಲ ಮತ್ತು ಕಾರಿನ ಮಾಲೀಕರ ಹೆಸರು ಲೊಕೇಶ್. ದಿಗ್ವಿಜಯ ಆಸ್ಪತ್ರೆಗೆ ಹೋದಾಗ ಸಮಯ 10-30 ಗಂಟೆ ಆಗಿತ್ತು.

ನಾವು ಹೋದ ಅರ್ಧ ಗಂಟೆಯಿಂದ ಮುಕ್ಕಾಲು ಗಂಟೆಯ ನಂತರ ಮಹಜರ್ ಪ್ರಾರಂಭಿಸಿರುತ್ತಾರೆ. ಮಹಜರ್ ನಲ್ಲಿ ಬರೆದ ವಿಷಯ ನನಗೆ ಗೊತ್ತಿರುತ್ತದೆ. ಮಹಜರ್ ನಲ್ಲಿ ಚಕ್ಕುಬಂದಿ ನಮೂದು ಮಾಡಿರುವ ಬಗ್ಗೆ ನನಗೆ ಗೊತ್ತಿಲ್ಲ. ಚಕ್ಕುಬಂದಿ ಬರೆದಿರುವ ಬಗ್ಗೆ ನನಗೆ ಮರೆತು ಹೋಗಿರುತ್ತದೆ. ಶಿವನಗರದ ಒಂಟಿ ಮನೆ ಬಸಣ್ಣ ನನಗೆ ಗೊತ್ತಿಲ್ಲ. ಆದರೆ ವಿಷಯ ಗೊತ್ತು. ನಾವು ದಿಗ್ವಿಯ ಆಸ್ಪತ್ರೆಗೆ ಹೋದಾಗ ಶವವನ್ನು ಫ್ರೀಜರ್ ನಲ್ಲಿ ಇಟ್ಟಿದ್ದರು ಸದರಿ ಫ್ರಿಜರ್ ಯಾವ ಕಂಪನಿಯದು ಎಂದು ನನಗೆ ಗೊತ್ತಿಲ್ಲ. ಸದರಿ ಫ್ರೀಜರ್ ಶವ ಎಷ್ಟು ಉದ್ದ ಇತ್ತೊ ಅಷ್ಟು ಉದ್ದ ಇತ್ತು. ನಾವು ಆಸ್ಪತ್ರೆಗೆ ಹೋದಾಗ ಫ್ರೀಜರ್ ನಲ್ಲಿ ಶವ ಅಂಗಾಂತ ಇತ್ತು.

ಪುಟ್ಟತಾಯಮ್ಮ ನನಗೆ ಸಂಬಂಧಿಯಾಗಬೇಕಾಗಿದಿದ್ದರಿಂದ ಪಿರ್ಯಾದಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆ ದಿನ ನಾನು ದಿಗ್ವಿಜಯ ಆಸ್ಪತ್ರೆಗೆ ಹೋಗಿರುವುದಿಲ್ಲ ಎಂದರೆ ಸರಿಯಲ್ಲ. ಪೊಲೀಸರು ಪೊಟೋವನ್ನು ಮೊಬೈಲ್ ನಲ್ಲಿ ತೆಗೆದಿರುತ್ತಾರೆ. ಆ ಸಮಯದಲ್ಲಿ ಸಮವಸ್ತ್ರದಲ್ಲಿದ್ದ ಇಬ್ಬರು ಪೊಲೀಸರು ಇದ್ದರು. ಪೊಟೋ ತೆಗೆದಾಗ ನನ್ನ ಜೊತೆ ಮುತ್ತರಾಜು , ಜಯಲಕ್ಷ್ಮಮ್ಮ , ಮಂಜಣ್ಣ , ಕಾಂತರಾಜು ಹಾಜರಿದ್ದರು. ನಾನು ಆಂಗ್ಲ ಭಾಷಯಲ್ಲಿ ಸಹಿ ಮಾಡುತ್ತೇನೆ. ನನ್ನ ಸಮಕ್ಷಮ ಯಾವುದೇ ಶವ ಮಹಜರ್ ಮಾಡಿರುವುದಿಲ್ಲ ಮತ್ತು ನಾನು , ಮುತ್ತರಾಜು , ಜಯಲಕ್ಷ್ಮಮ್ಮ , ಮಂಜಣ್ಣ , ಕಾಂತರಾಜು ಹಾಜರಿರಲಿಲ್ಲ ಎಂದರೆ ಸರಿಯಲ್ಲ. ಮಹಜರನ್ನು 11-30 ರಿಂದ 2-00 ಗಂಟೆಯವರೆಗೆ ಮಾಡಿರುತ್ತಾರೆ. ನಾನು , ಮಂಜಣ್ಣ , ಮುತ್ತಣ್ಣ ಸಾಕ್ಷಿಗಳಾಗಿ ಮಹಜರ್ ಗೆ ಸಹಿ ಮಾಡಿರುತ್ತೇವೆ.

**ಮರುವಿಚಾರಣೆ ಇಲ್ಲ.**

(ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

**ಒ ತಿ ಹೇ ಸ ಇದೆ.**

**4 ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,**

**ತುಮಕೂರು-ಮಧುಗಿರಿ.**